





ಬಿಇ ಮುಗಿಸಿಕೊಂಡು ಮನೆಗೆ ಬರುವಾಗ ಮಗ ಜೊತೆಯಲ್ಲಿ ಒಬ್ಬ ಹುಡುಗಿಯನ್ನು ಕರೆದುಕೊಂಡು ಬಂದ.
**ಅಪ್ಪ:** ಯಾರ್ಲಾ ಇವಳು?
**ಮಗ:** ಅಪ್ಪಾ ಈಕೆ ನನ್ನ ಕ್ಯಾಂಪಸ್ ಸೆಲೆಕ್ಷನ್!

ಗಂಡ ಹೆಂಡತಿ ಜಗಳವಾಗಿತ್ತು. ಹೆಂಡತಿ ಗಂಡ ಹೇಳಿದ ಮಾತನ್ನು ಕೇಳುತ್ತಿರಲಿಲ್ಲ. ಆಕೆಯ ನಡವಳಿಕೆ ಬಗ್ಗೆ ದೂರಲು ಅತ್ತೆಗೆ ಫೋನ್ ಮಾಡಿದ. ಅದಕ್ಕೆ ಕಿಡಿಕಾರಿದ ಹೆಂಡತಿ, 'ನನ್ನಿಂದ ತಪ್ಪಾಗಿದ್ದರೆ, ನನ್ನ ಬಳಿ ಹೇಳಿ. ನಮ್ಮಮ್ಮನಿಗೆ ಯಾಕೆ ಫೋನ್ ಮಾಡಿ ಹೇಳ್ತೀರಾ' ಎಂದಳು. ಅದಕ್ಕೆ ಗಂಡ, 'ಮನೆಯ ಟಿ.ವಿ. ಹಾಳಾದರೆ, ಅದರ ಹತ್ತಿರ ಹೇಳೋಕೆ ಆಗುತ್ತಾ? ಅದನ್ನು ತಯಾರಿಸಿದ ಕಂಪನಿಗೆ ತಾನೆ ಹೇಳಬೇಕು. ಅದಕ್ಕೆ ನಿಮ್ಮಮ್ಮನಿಗೆ ಫೋನ್ ಮಾಡಿ ಹೇಳಿದ್ದೀನಿ'. ಅಳಿಯನ ದೂರಿಗೆ ಅತ್ತೆಯ ಉತ್ತರ ಹೀಗಿತ್ತು... 'ನೋಡಿ ಅಳಿಯಂದಿರೆ, ನಾವು ನಿಮಗೆ ಕೊಟ್ಟ ಪ್ರಾಡಕ್ಟ್‌ನ ವಾರಂಟಿ ಇದ್ದದ್ದು ಕೇವಲ ಎರಡು ವರ್ಷ. ಅದು ಈಗಾಗಲೇ ಮುಗಿದುಹೋಗಿದೆ. ನೀವೇ ರಿಪೇರಿ ಮಾಡಿಕೊಳ್ಳಿ'.

**ಪುಟ್ಟಿ:** ಆಂಟಿ, ನಮ್ಮಮ್ಮ ನಿಮ್ಮ ಹತ್ರ ಸಕ್ಕರೆ ಇಸ್ಕೊಂಡು ಬಾ ಅಂತ ಹೇಳಿದ್ದಾರೆ, ಸಕ್ಕರೆ ಕೊಡಿ.
**ಆಂಟಿ:** ಸರಿ, ಅಮ್ಮ ಇನ್ನೇನು ಹೇಳಿದ್ದಾರೆ?
**ಪುಟ್ಟಿ:** ಆ ಪಾತರಗಿತ್ತಿ ಕೊಡದಿದ್ದರೆ ಪಕ್ಕದ ಮನೆ ಸಲ್ಮಾ ಆಂಟಿ ಹತ್ತಿರ ಇಸ್ಕೊಂಡು ಬಾ ಅಂದ್ರು.

**ಮಗಳು:** ಕಾಗೆ ಕೂಗಿದರೆ ಮನೆಗೆ ನೆಂಟರು ಬರ್ತಾರಂತೆ ಹೌದಾ ಅಪ್ಪ?
**ತಂದೆ:** ಹೌದು ಮಗಳೆ.
**ಮಗಳು:** ಹಾಗಾದ್ರೆ ಬಂದ ನೆಂಟರು ವಾಪಸ್ ಹೋಗಕ್ಕೆ ಏನು ಮಾಡಬೇಕು?
**ತಂದೆ:** ನಿನ್ನ ಅಮ್ಮ ಕೂಗಾಡಿದರೆ ಸಾಕು.

ಪೈಲ್ಸ್ ರೋಗಿಯನ್ನು ಡಾಕ್ಟರ್ ಕೇಳಿದರು.
**ಡಾಕ್ಟರ್:** ನೀನು ಆರ್‌ಸಿಬಿ ವಿರೋಧಿಯೇನಪ್ಪ?
**ರೋಗಿ:** ಹೌದು ಡಾಕ್ಟರ್ ನಿಮಗೆ ಹೇಗೆ ಗೊತಾಯ್ತು?
**ಡಾಕ್ಟರ್:** ಉರ್ಕೊಂಡು ಉರ್ಕೊಂಡು ಕೆಳಗೆ ಸಿಕ್ಕಾಪಟ್ಟೆ ಸುಟ್ಟೋಗಿದೆ ಅದಕ್ಕೆ ಕೇಳ್ದೆ.

ರಾಮಲೀಲಾ ಮೈದಾನದಲ್ಲಿ ರಾವಣನ ಪ್ರತಿಮೆಗೆ ಬೆಂಕಿ ಹಚ್ಚಿ ಉರಿಯುತ್ತಿರುವುದನ್ನು ನೋಡ್ತಾ ನಿಂತ ಜನರಿಗೆ ರಾವಣನ ಪ್ರಶ್ನೆ ಹೀಗಿತ್ತು.
**ರಾವಣ:** ದುಷ್ಟ ಮನುಜರೆ, ನೀವೆಲ್ಲ ಸೇರಿ ನನಗೆ ಯಾಕೆ ಬೆಂಕಿ ಹಚ್ಚಿದೀರಾ? ನಾನೇನು ನಿಮ್ಮ ಹೆಂಡತಿನ ಎತ್ಕೊಂಡು ಹೋಗಿದ್ನಾ?
**ವ್ಯಕ್ತಿ:** (ಆಕ್ರೋಶದಿಂದ ಜೋರಾಗಿ ಕಿರುಚಿ ಹೇಳಿದ) ನಮ್ಮ ಹೆಂಡತಿನ ಎತ್ಕೊಂಡು ಹೋಗಿಲ್ಲ ಅಂತಾನೆ ಬೆಂಕಿ ಹಚ್ತುತ್ತಿರೋದು.

**ಹೆಂಡತಿ:** ಏನ್ರೀ ಇಷ್ಟು ಬೇಗ ಬಂದ್ರಿ?
**ಗಂಡ:** ನಾ ಕಾಫಿ ಕುಡಿಯಲು ಹೊರಗೆ ಹೋಗಿದ್ದಾಗ ನಮ್ಮ ಆಫೀಸ್‌ನ ಚಾವಣಿ ಕುಸಿದು ಎಲ್ಲರೂ ಪ್ರಾಣ ಕಳಕೊಂಡರು.
**ಹೆಂಡತಿ:** ಅಬ್ಬಾ ದೇವರು ದೊಡ್ಡವನು ನಿಮಗೇನು ಆಗಲಿಲ್ಲವಲ್ಲ?
**ಗಂಡ:** ಪ್ರಾಣ ಕಳೆದುಕೊಂಡ ಮನೆಯವರಿಗೆಲ್ಲ ಒಂದು ಕೋಟಿ ರೂಪಾಯಿ ಪರಿಹಾರ ಕೊಡ್ತಿದಾರೆ.
**ಹೆಂಡತಿ:** ಹಾಳಾದ ಕಾಫಿ ದುರಭ್ಯಾಸ ಅದ್ಯಾವತ್ತು ಬಿಡ್ತೀರೋ?

ಸಂಗ್ರಹ: ಭಾರತೀ ಗಂಗಾಧರ್, ಬೆಂಗಳೂರು